## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ: 101/2021

ಪಿ.ಡಬ್ಲ್ಯೂ-3
ಸಿ.ಡಬ್ಲ್ಯೂ-5

| | | |
|---|---|---|
| ಹೆಸರು | : | ವೈಷ್ಣವಿ ಬಾಬುರಾವ ಪಾಟೀಲ |
| ವಯಸ್ಸು | : | **22** ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಗರ್ಲಗುಂಜಿ ಗ್ರಾಮ. |

ದಿನಾಂಕ 13-02-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :** ಸಸಅ ರವರಿಂದ

ಚಾ.ಸಾ.1 ನನ್ನ ತಾಯಿ. ಚಾ.ಸಾ.6 ರಿಂದ 9 ರವರು ನಮ್ಮ ಮನೆಯ ಅಕ್ಕಪಕ್ಕದ ನಿವಾಸಿಗಳಾಗಿರುತ್ತಾರೆ. ಆರೋಪಿಗಳು ಗೊತ್ತು. ದಿನಾಂಕ 25.08.2020 ರಂದು ಆ ದಿನ ನಾನು ನಮ್ಮ ಮನೆಯಲ್ಲಿ ಇದ್ದು, ನಮ್ಮ ಪರಿಚಯದ ವಿವೇಕ ಗಿರಿ ಎನ್ನುವವರು ಫೋನ್ ಮಾಡಿದ್ದು ಗಲಾಟೆಯಾಗುತ್ತಿದೆ ಹೋಗಿ ಎಂದು ತಿಳಿಸಿದ್ದು, ಪರಶುರಾಮ ರವರ ಮನೆಯ ಬಳಿ ನಾವು ಹೋಗಿದ್ದು, ಅಲ್ಲಿ ಆರೋಪಿಗಳೆಲ್ಲಾ ನನ್ನ ಅಣ್ಣನಿಗೆ ಹೊಡೆಯುತ್ತಿದ್ದು, ನಾವು ಬಿಡಿಸಲು ಹೋದಾಗ ನನಗೂ ಹಾಗೂ ನನ್ನ ತಾಯಿಗೂ ಆರೋಪಿತರು ಖಾರದ ಪುಡಿ ಎರಚಿರುತ್ತಾರೆ. ಸದರಿ ಘಟನೆಯನ್ನು ನೋಡಿ ನಮ್ಮ ತಾಯಿ ಮುರ್ಚೆ ತಪ್ಪಿರುತ್ತಾರೆ. ಅಕ್ಕಪಕ್ಕದವರು ಗಲಾಟೆಯನ್ನು ಬಿಡಿಸಿದ್ದು ನಮ್ಮ ತಾಯಿಯನ್ನು ನಾನು ಖಾನಾಪೂರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇನೆ. ನಮ್ಮ ಅಣ್ಣನನ್ನು ಈ ಬಗ್ಗೆ ವಿಚಾರಿಸಿದಾಗ ನಮ್ಮ ಅಣ್ಣ ತನ್ನ ಗೆಳೆಯನನ್ನು ಅವರ ಮನೆಗೆ ಬಿಡಲು ಹೋಗುವಾಗ ಆರೋಪಿತರ ಮನೆಯ ಬಳಿ ಗಾಡಿ ಕೆಟ್ಟು ನಿಂತಿದ್ದು, ಆಗ ಆರೋಪಿತರು ಏಕಾಏಕಿ ನಮ್ಮ ಮನೆಯ ಮುಂದೆ ಏಕೆ ನಿಂತಿದ್ದೀಯಾ ಎಂದು ಗಲಾಟೆ ಮಾಡಿ ಹೊಡೆದಿರುವ ವಿಚಾರವನ್ನು ತಿಳಿಸಿರುತ್ತಾರೆ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಿ.ಎಸ್.ಹೆಚ್. ವಕೀಲರಿಂದ</u>

ನಾನು ದ್ವಿತಿಯ ಪಿ.ಯು.ಸಿ ವರೆಗೆ ಮರಾಠಿ ಭಾಷೆಯಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಒಂದನೇ ಆರೋಪಿ ಸ್ಟೇಟ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಮೂರನೇ ಆರೋಪಿ ಸೈನ್ಯದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಎರಡನೇ ಆರೋಪಿ ಗೋವಾದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಆರೋಪಿತರ ಕುಟುಂಬ ಒಳ್ಳೆಯ ಕುಟುಂಬ ಆಗಿರುತ್ತದೆ ಎಂದರೆ ಸರಿ. ಆರೋಪಿತರು ನನಗೆ ಚಿಕ್ಕವರಿದ್ದಾಗಿನಿಂದ ಪರಿಚಿತರಿರುತ್ತಾರೆಂದರೆ ಸರಿ. ನಮ್ಮ ತಂದೆ ಹಾಗೂ ಒಂದನೇ ಆರೋಪಿ ಸ್ನೇಹಿತರಾಗಿದ್ದರು ಎಂದರೆ ಸರಿ. ನನ್ನ ತಂದೆ ಹಾಗೂ ಆರೋಪಿತರು ಯಾವ ರೀತಿ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಪೋಲೀಸರು ವಿಚಾರಣೆ ಮಾಡಲು ಯಾವತ್ತೂ ಕರೆದಿಲ್ಲ. ಪೋಲೀಸರು ನನ್ನನ್ನು ಯಾವತ್ತೂ ಭೇಟಿಯಾಗಿರುವುದಿಲ್ಲ. ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲವೆಂದರೆ ಸರಿ.

ನಮ್ಮ ಹಾಗೂ ಆರೋಪಿಗಳ ಮನೆಗೆ ಸುಮಾರು ಅರ್ಧ ಕಿಲೋಮೀಟರ ದೂರವಾಗುತ್ತದೆ. ನಮ್ಮ ಮನೆಯಿಂದ ಆರೋಪಿತರ ಮನೆಗೆ ಎಷ್ಟು ದೂರವಾಗುತ್ತದೆಯೆಂದು ನನಗೆ ಗೊತ್ತಿಲ್ಲ. ಆರೋಪಿತರ ಮನೆಯ ಅಕ್ಕಪಕ್ಕ ಸುಮಾರು 15 ರಿಂದ 20 ವಾಸದ ಮನೆಗಳು ಇರುತ್ತವೆ. ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರನ್ನು ಹೆಸರಿಸಿರುವ ಚಾ.ಸಾ.6 ರಿಂದ 9 ರವರ ಮನೆಗಳು ಆರೋಪಿತರ ಮನೆಯ ಅಕ್ಕಪಕ್ಕದಲ್ಲಿದ್ದು ಉಳಿದವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಚಾ.ಸಾ.6 ರಿಂದ 9 ರವರು ನಮಗೆ ಪರಿಚಿತರಾಗಿರುತ್ತಾರೆಂದರೆ ಸರಿ. ನಮ್ಮ ಹಾಗೂ ಅವರ ನಡುವೆ ಸಂಬಂಧ ಚೆನ್ನಾಗಿರುತ್ತದೆ. ಘಟನಾ ಸ್ಥಳಕ್ಕೆ ನಾವು 9.30 ಗಂಟೆ ಸಮಯಕ್ಕೆ ಹೋಗಿರುತ್ತೇವೆ. ಗಲಾಟೆಯ ಸಮಯದಲ್ಲಿ 10 ರಿಂದ 15 ಜನ ಸಾರ್ವಜನಿಕರು ಸದರಿ ಸ್ಥಳದಲ್ಲಿ ಇದ್ದರು. ಆ ಸಮಯದಲ್ಲಿ ವಿದ್ಯುತ್ ಇರದ ಕಾರಣ ಕತ್ತಲಿದ್ದು, ಯಾರು ಯಾರು ಇದ್ದರೆಂದು ನನಗೆ ಹೇಳಲು ಆಗುವುದಿಲ್ಲ.

ಒಂದನೇ ಆರೋಪಿ ಕಲ್ಲಿನಿಂದ, ಎರಡನೇ ಆರೋಪಿ ಕೈಯಿಂದ ಹಾಗೂ ಮೂರನೇ ಆರೋಪಿ ಕೈಯಿಂದ ನಮ್ಮ ಅಣ್ಣನಿಗೆ ಹಲ್ಲೆ ಮಾಡಿರುತ್ತಾರೆ. ಸುಮಾರು ಅರ್ಧ ಗಂಟೆಗಳ ವರೆಗೆ ಆರೋಪಿತರು ನನ್ನ ಅಣ್ಣನ ಮೇಲೆ ಹಲ್ಲೆ ಮಾಡಿರುತ್ತಾರೆ. ನನ್ನ ಅಣ್ಣನಿಗೆ ಸದರಿ ಹಲ್ಲೆಯಿಂದ ರಕ್ತಗಾಯವಾಗಿರುತ್ತದೆ. ನಮ್ಮ ಅಣ್ಣನಿಗೆ ತಲೆ ಹಾಗೂ ಇತರೆ ಭಾಗಗಳಲ್ಲಿ ರಕ್ತಗಾಯವಾಗಿದ್ದು ಸದರಿ ರಕ್ತದ ಕಲೆಗಳು ನಮ್ಮ ಅಣ್ಣ ತೊಟ್ಟಿದ್ದ ಬಟ್ಟೆಗೆ ತಗುಲಿರುತ್ತದೆ. ನಮ್ಮ ತಾಯಿಗೂ ಸಹ ಹಲ್ಲೆ

ಮಾಡಿದ್ದು, ತಲೆಗೆ ರಕ್ತಗಾಯವಾಗಿರುತ್ತದೆ. ಖಾರದ ಪುಡಿಯನ್ನು ಎರಚಿ ಹಲ್ಲೆ ಮಾಡಿರುತ್ತಾರೆ. ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾವು ಟೆಂಪೊ ಟ್ರಾಕ್ಸ ಮೂಲಕ ನಮ್ಮ ತಾಯಿಯನ್ನು ದವಾಖಾನೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಗಾಡಿಯ ನಂಬರ ನನಗೆ ಗೊತ್ತಿಲ್ಲ. 10.30 ಸಮಯಕ್ಕೆ ಸದರಿ ಟೆಂಪೋ ಟ್ರಾಕ್ಸ್ ಘಟನಾ ಸ್ಥಳಕ್ಕೆ ಬಂದಿರುತ್ತದೆ. ನಾನು ಮತ್ತು ನನ್ನ ಅಣ್ಣ, ನಮ್ಮ ತಾಯಿಯವರನ್ನು ದವಾಖಾನೆಗೆ ಕರೆದುಕೊಂಡು ಬಂದಿರುತ್ತೇವೆ. ನಾವು ರಾತ್ರಿ 11.00 ಗಂಟೆಗೆ ಖಾನಾಪೂರದ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ನಮ್ಮ ಅಣ್ಣ ಹಾಗೂ ನಮ್ಮ ತಾಯಿ ಇಬ್ಬರೂ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ಈ ದಿನ ನ್ಯಾಯಾಲಯದಲ್ಲಿ ಮೇಲ್ಕಂಡ ವಿಷಯವನ್ನು ನ್ಯಾಯಾಲಯದಲ್ಲಿ ಹೊರತುಪಡಿಸಿ ಬೇರೆ ಎಲ್ಲೂ ಹೇಳಿರುವುದಿಲ್ಲ. ಈ ದಿನ ನನ್ನ ಜೊತೆ ನಮ್ಮ ತಾಯಿ ಬಂದಿರುತ್ತಾರೆಂದರೆ ಸರಿ. ನಮ್ಮ ತಾಯಿ ಹೇಳಿಕೊಟ್ಟ ಹಾಗೆ ಈ ದಿನ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಯಾವುದೇ ಘಟನೆ ನಡೆಯದಿದ್ದರೂ, ನಮ್ಮ ತಾಯಿ ಆರೋಪಿತರ ಮೇಲೆ ಸುಳ್ಳು ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ನಾನು ನಮ್ಮ ತಾಯಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.